**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,**

**ಹೆಚ್.ಡಿ.ಕೋಟೆ**

ಸಿ.ಸಿ.544/2023

**ಪಿರ್ಯಾದುದಾರರು** **ಆರೋಪಿ**

**ವಿರುದ್ಧ**

ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ಶ್ರೀ ಅಶ್ವಥ ಮೂರ್ತಿ ಮತ್ತು ಮತ್ತೊಬ್ಬರು

**:: ದೋಷಾರೋಪಣೆ ::**

**ಶ್ರೀ ಸಂತೋಷ ಕೊಠಾರಿ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹಚ್.ಡಿ.ಕೋಟೆ, ಆದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀ.ಅಶ್ವಥ ಮೂರ್ತಿ
   ಬಿನ್ ಲೇಟ್ ಚಿನ್ನಪ್ಪಚಾರ್
   ವಯಸ್ಸು 60 ವರ್ಷ
2. ಶ್ರೀಮತಿ.ನಾಗರತ್ನ
   ಕೋಂ ಅಶ್ವಥ ಮೂರ್ತಿ
   ವಯಸ್ಸು 45 ವರ್ಷ,
   ಇಬ್ಬರ ವಿಳಾಸ : ರಾಮೇನಹಳ್ಳಿ ಗ್ರಾಮ,
   ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ 12.09.2023 ರಂದು ಸಂಜೆ 06.00 ಗಂಟೆ ಸಮಯದಲ್ಲಿ ಹೆಚ್.ಡಿ.ಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯ ಮುಷ್ಕೆರೆ ಗ್ರಾಮದ ತಕರಾರು ಇರುವ ಮತ್ತು ದಾಖಲಾತಿಗಳಿಲ್ಲದ ಸ.ನಂ 50/104 ಎಂದು ಹೇಳುವ ಜಮೀನಿನಲ್ಲಿ ಸಾಕ್ಷಿ-1 ರವರು ಕೆಲಸ ಮಾಡುತ್ತಿದ್ದಾಗ ಸಾಕ್ಷಿ-1 ರವರ ಸ್ವಂತ ತಮ್ಮನಾದ 1 ಮತ್ತು 2 ನೇ ಆರೋಪಿಗಳು ಬಂದು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಒಟ್ಟುಗೂಡಿ ಸಾಕ್ಷಿ-1 ರವರನ್ನು ಕುರಿತು ಈ ಜಮೀನು ನಮಗೆ ಸೇರಿದ್ದು, ಇಲ್ಲಿಗೆ ಬರಬೇಡ ಎಂದು ಜಗಳ ತೆಗೆದು ಬಾಯಿಗೆ ಬಂದಂತೆ ಬೈದು 1 ನೇ ಆರೋಪಿ ಅಲ್ಲಿಯೇ ಬಿದ್ದಿದ್ದ ಬಿದಿರಿನ ಹಚ್ಚೆಯಿಂದ ಸಾಕ್ಷಿ-1 ರವರ ಎಡಕಾಲು ಮತ್ತು ಎಡ ತೊಡೆಗೆ ಹೊಡೆದು ಗಾಯಪಡಿಸಿದ್ದಲ್ಲದೆ, ನಿಮ್ಮಗಳ ಪೈಕಿ 2 ನೇ ಆರೋಪಿಯಾದ ನೀವು ಅಲ್ಲಿಯೇ ಬಿದ್ದಿದ್ದ ನೇಗಿಲಿನ ಕಬ್ಬಿಣದ ರಾಡಿನ ತುಂಡಿನಿಂದ ಸಾಕ್ಷಿ-1 ರವರ ತಲೆಯ ಎಡಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿಗಳಾದ

ನೀವುಗಳು ಭಾ.ದಂ.ಸಂ.ಕಲಂ **324** ಸಹವಾಚಕ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ಸದರಿ ಜಮೀನಿನಲ್ಲಿದ್ದ ಹಳೆಯ ಮಟ್ಟಾಳೆಗರಿಯ ಶೆಡ್ಡು ಮತ್ತು **5** ತೆಂಗಿನ ಸಸಿಗಳನ್ನು ಕಿತ್ತು ಹಾಕಿರುವುದರಿಂದ ಸಾಕ್ಷಿ-**1** ರವರಿಗೆ ಸುಮಾರು **2,000/-** ರೂಗಳಷ್ಟು ನಷ್ಟ ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವುಗಳು ಭಾ.ದಂ.ಸಂ. ಕಲಂ.427 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ಸಾಕ್ಷಿ-1 ರವರನ್ನು ಕುರಿತು "ಈ ಜಮೀನು ನಮಗೆ ಸೇರಿದ್ದು, ಇಲ್ಲಿಗೆ ಬರಬೇಡ ಎಂದು ಜಗಳ ತೆಗೆದು ಬಾಯಿಗೆ ಬಂದಂತೆ ಬೈದು" ಶಾಂತಿ ಭಂಗವನ್ನುಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **504** ಸಹವಾಚಕ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

03 ನೇ ಸೆಪ್ಟೆಂಬರ್ ಮಾಹೆ 2025.

-ಸಹಿ/-

**(ಸಂತೋಷ ಕೊಠಾರಿ)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ.